# ಭಾರತದ ಅಭಿವೃದ್ಧಿಗೆ ಸ್ವಾಮಿ ವಿವೇಕಾನಂದರ ವಿಚಾರಧಾರೆ

ಎಚ್.ಎನ್. ಸೋಮಸುಂದರಂ

## ಅಭಿವೃದ್ಧಿಯ ಕಲ್ಪನೆ

'ಅಭಿವೃದ್ಧಿ' ಎಂಬ ಪದವು ಯಾರಿಗೂ ಹೊಸದೇನೂ ಅಲ್ಲ. ಅದು ಮಾತ್ರವಲ್ಲ, ಎಲ್ಲರೂ ಬಯಸುವುದೇ ಅದನ್ನು. ಸಾಮಾನ್ಯ ತಿಳಿವಳಿಕೆಯಲ್ಲಿ ಇದಕ್ಕೆ 'ಒಳ್ಳೆಯ ಬೆಳವಣಿಗೆ' ಎಂಬ ಅರ್ಥ ಇದೆ. ಧನಾತ್ಮಕವಾಗಿ ಒಳ್ಳೆಯ ಬೆಳವಣಿಗೆಯಾದರೆ ಅದಕ್ಕೆ 'ಅಭಿವೃದ್ಧಿ' ಎಂದು ಹೇಳಬಹುದು. ಆದರೆ ಬೆಳವಣಿಗೆ ಎಲ್ಲಿಯವರೆಗೆ ಆಗಬೇಕು? ಅದರ ಪರಿಪೂರ್ಣತೆಯವರೆಗೆ. ಒಂದು ಕಾಡು ದಟ್ಟವಾಗಿ ಮರಗಳಿಂದ ಕೂಡಿ ಜಲಾಶಯಗಳು ಮತ್ತು ಕಾಡುಮೃಗಗಳಿಂದ ಸಮೃದ್ಧವಾಗಿದ್ದರೆ, ಅದನ್ನು 'ಪರಿಪೂರ್ಣ ಅರಣ್ಯ' ಎಂದು ಭಾವಿಸಬಹುದು. ಹಾಗೆಯೇ ಒಂದು ಚಿಟ್ಟೆ ಸುಂದರ ಬಣ್ಣಗಳಿಂದ ಕಂಗೊಳಿಸಿದಾಗ ಒಂದು ರೀತಿಯ ಪರಿಪೂರ್ಣತೆಯ ಸೌಂದರ್ಯವನ್ನು ಅದರಲ್ಲಿ ನಾವು ಕಾಣಬಹುದು.

## ಪರಿಪೂರ್ಣತೆಗೆ ಮಾರ್ಗವಾಗಿ ಅಭಿವೃದ್ಧಿ

ಹಾಗಾದರೆ ಪರಿಪೂರ್ಣತೆಯೆಂದರೇನು? ಅದರಲ್ಲಿ ಅಭಿವೃದ್ಧಿಯ ಪಾತ್ರವೇನು? ಇದನ್ನು ಫೋಟೋಗ್ರಫಿಯ ಭಾಷೆಯಲ್ಲಿ ಚೆನ್ನಾಗಿ ವಿವರಿಸಬಹುದು. ನೀವು ಛಾಯಾಗ್ರಾಹಕನಿಗೆ ನೆಗೆಟಿವ್‌ಗಳನ್ನು ಕೊಟ್ಟು ಬಂದಿರಿ. ಸಂಜೆ ಹೋಗಿ ಕೇಳಿದಾಗ ಆತ ಹೇಳುತ್ತಾನೆ, "ಸರ್, ನಾನಿನ್ನೂ ನಿಮ್ಮ ನೆಗೆಟಿವ್‌ಗಳನ್ನು ಡೆವಲಪ್ ಮಾಡಿಲ್ಲ, ನಾಳೆ ಬನ್ನಿ." ನೀವು ಕೊಟ್ಟ ನೆಗೆಟಿವ್‌ಗಳನ್ನು ಬಳಸಿಕೊಂಡು, ಬೇಕಾದ ರಾಸಾಯನಿಕಗಳನ್ನು ಸೇರಿಸಿ, ಅವುಗಳಲ್ಲಿ ಹುದುಗಿರುವ ಚಿತ್ರವನ್ನು ಪೂರ್ಣವಾಗಿ ಹೊರ ಹೊಮ್ಮಿಸುವ ಕೆಲಸವನ್ನು ಅವನು ಮಾಡುತ್ತಾನೆ. ಹಾಗೆಯೇ ನಮ್ಮಲ್ಲಿ ಸುಪ್ತವಾಗಿರುವ ಶಕ್ತಿಯನ್ನು, ಇತರ ಪೂರಕ ಅಂಶಗಳ ಸಹಾಯದಿಂದ, ಪರಿಪೂರ್ಣತೆಯನ್ನು ಸಾಧಿಸಿ, ಪ್ರಕಾಶಿಸುವುದೇ ಅಭಿವೃದ್ಧಿಯ ಗುರಿ.

## ಇದೆಂತಹ ಅಭಿವೃದ್ಧಿ?

ಆರ್ಥಿಕತೆಯ ಕ್ಷೇತ್ರದಲ್ಲಿ ಬೆಳವಣಿಗೆಯಾದರೆ ಅದು ಆರ್ಥಿಕ ಅಭಿವೃದ್ಧಿ. ಆದರೆ ಇದೇ ಇಂದು ಅಭಿವೃದ್ಧಿಯ ಅಳತೆಗೋಲಾಗಿ ಹೆಚ್ಚಾಗಿ ಪರಿಗಣಿಸಲ್ಪಡುತ್ತಿದೆ. ಇದು ಇಂದಿನ ವಿಶ್ವವು ಸಾಗುತ್ತಿರುವ ದಿಕ್ಕನ್ನು ಸೂಚಿಸುತ್ತದೆ. ಒಂದು ವೇಳೆ ಆರ್ಥಿಕ ಅಭಿವೃದ್ಧಿಯೇ ಮಾನವ ಪ್ರಗತಿಯನ್ನು ಸೂಚಿಸುವುದಾದರೆ ಶ್ರೀಮಂತ ರಾಷ್ಟ್ರಗಳೆಲ್ಲವೂ ಸುಖಸಂತೋಷಗಳಿಂದ ಇರಬೇಕಾಗಿತ್ತು; ಹಾಗೆಯೇ ಆರ್ಥಿಕವಾಗಿ ಮುಂದುವರೆದ ಜನರೆಲ್ಲ ಆನಂದದಿಂದ ಇರಬೇಕಾಗಿತ್ತು. ಆದರೆ ವಾಸ್ತವಾಂಶಗಳು ಬೇರೆ ಕಥೆಯನ್ನೇ ಹೇಳುತ್ತವೆ.

> ಮಾನ್ಯ ಲೇಖಕರು ಗಿರಿಜನಕಲ್ಯಾಣದ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದವರು. ಇವರ ಹಲವು ಲೇಖನಗಳು ಈ ಪತ್ರಿಕೆಯಲ್ಲಿ ಪ್ರಕಟವಾಗಿವೆ. ಇವರು ಬೆಂಗಳೂರು ರಾಮಕೃಷ್ಣ ಮಠದ ಭಕ್ತರು.

ಒಮ್ಮೆ ಬೆಂಗಳೂರಿನಿಂದ ಒಬ್ಬರು ಬಿಳಿಗಿರಿರಂಗನ ಬೆಟ್ಟಕ್ಕೆ ಬಂದರು. ಅವರು ಬರುವ ಆತುರದಲ್ಲಿ ತಮ್ಮ ರಕ್ತದೊತ್ತಡದ ಮಾತ್ರೆಗಳನ್ನು ಮರೆತು ಬಂದಿದ್ದರು. "ಅದಕ್ಕೇನಂತೆ, ಸದ್ಯಕ್ಕೆ ನಮ್ಮ ಆಸ್ಪತ್ರೆಯಿಂದ ತೆಗೆದುಕೊಳ್ಳಿ" ಎಂದು ಅವರನ್ನು ನಮ್ಮ ಆವರಣದಲ್ಲಿಯೇ ಇದ್ದ ಗಿರಿಜನರ ಆಸ್ಪತ್ರೆಗೆ ಕಳಿಸಿಕೊಟ್ಟೆವು. ಆದರೆ ಅಲ್ಲಿ ಆ ಮಾತ್ರೆಗಳೇ ಇರಲಿಲ್ಲ. ನಾನು ವಿಚಾರಿಸಿದಾಗ ತಿಳಿದದ್ದು ಇಷ್ಟು: ಅಧಿಕ ರಕ್ತದೊತ್ತಡ ಗಿರಿಜನರಲ್ಲಿ ಬಹು ಕಡಿಮೆ; ಆದ್ದರಿಂದ ಈ ಮಾತ್ರೆಗಳನ್ನು ಅಲ್ಲಿಗೆ ಹೆಚ್ಚಾಗಿ ತರಿಸುವ ಆವಶ್ಯಕತೆಯೇ ಇರುವುದಿಲ್ಲ. ಇನ್ನೊಮ್ಮೆ ಅಲ್ಲಿ ನಿಮ್ಹಾನ್ಸ್‌ನ ಸಹಾಯದಿಂದ ಮಾನಸಿಕ ಆರೋಗ್ಯ ಶಿಬಿರ ನಡೆಸಿದಾಗ, ಅದಕ್ಕೆ ಅಭ್ಯರ್ಥಿಗಳೇ ಇಲ್ಲದೆ, ಇದೇ ತರಹದ ಅನುಭವವಾಯಿತು.

ಪರಮಪೂಜ್ಯ ಸ್ವಾಮಿ ಯತೀಶ್ವರಾನಂದರು ಒಂದೆಡೆ ಹೀಗೆ ಬರೆಯುತ್ತಾರೆ; "ಅಮೆರಿಕ, ಸ್ವೀಡನ್ ಮತ್ತು ಸ್ವಿಟ್ಸರ್ಲೆಂಡ್ ದೇಶಗಳು ಅಭಿವೃದ್ಧಿ ಹೊಂದಿದ ರಾಷ್ಟ್ರಗಳೆಂದು ಪರಿಗಣಿಸಲ್ಪಟ್ಟಿವೆ. (ಆದರೆ) ಇದೇ ರಾಷ್ಟ್ರಗಳು ಮಾನಸಿಕ ಅಸ್ವಸ್ಥತೆ, ಬಾಲಾಪರಾಧ ಮತ್ತು ಆತ್ಮಹತ್ಯೆ ಪ್ರಕರಣಗಳಲ್ಲಿ ಒಂದಕ್ಕಿಂತ ಒಂದು ಎತ್ತಿದ ಕೈ."

ಇವೆಲ್ಲವೂ ಬುಡಮೇಲು ಅಭಿವೃದ್ಧಿಯಿಂದಾಗುವ ದುಷ್ಪರಿಣಾಮಗಳು. ಇದಲ್ಲದೆ ಮಾನವನು ಕಂಡುಹಿಡಿಯುತ್ತಿರುವ ವೈಜ್ಞಾನಿಕ ಸಾಧನೆಗಳ ದುರುಪಯೋಗವಾಗುತ್ತಿರುವುದು ಕೂಡ ಈ ಆತಂಕವನ್ನು ಹೆಚ್ಚಿಸುತ್ತ ಇದೆ. ಈ ಬಗೆಯ ಆತಂಕದಿಂದಲೇ ಈ ಕವಿವಾಣಿ ಮೂಡಿಬಂದಿದೆಯೇನೋ:

**ನೊಣಮೀಸೆಯ ಹುಳುಹೆಜ್ಜೆಯ ಎಣಿಸುವ ಬಿಜ್ಜೆಯ ಬಲ್ಲ;**
**ತನ್ನಾತ್ಮವ ತಾನರಿಯುವ ಸಾಧನೆಯೊಂದನು ಒಲ್ಲ!**
**ಅನ್ವೇಷಣೆ! ಅನ್ವೇಷಣೆ! ಸುಖಿಸಲು ಪುರುಸತ್ತಿಲ್ಲ!**
**ತಿಳಿದೂ ತಿಳಿದೂ ತಿಳಿದೂ ಕಡೆಗೇನೂ ಗೊತ್ತಿಲ್ಲ!**

(ಕುವೆಂಪುರವರ "ಶತಮಾನ ಸಂಧ್ಯೆ" ಯಿಂದ)

## ಪರಿಪೂರ್ಣತೆಯ ಪ್ರಕಾಶನದ ಆಧ್ಯಾತ್ಮಿಕ ಹಿನ್ನೆಲೆ

ಆದ್ದರಿಂದ ಬಾಹ್ಯ ಪ್ರಪಂಚ ಯಾವುದನ್ನು ಅಭಿವೃದ್ಧಿಯೆಂದು ತಿಳಿಯುತ್ತದೊ, ಅದು ಖಂಡಿತವಾಗಿ ನೈಜ ಅಭಿವೃದ್ಧಿಯಲ್ಲ.

**ಜನಸಾಮಾನ್ಯರನ್ನು ಕಡೆಗಣಿಸಿದ್ದು ಅತಿ ದೊಡ್ಡ ರಾಷ್ಟ್ರೀಯ ಪಾಪವೆಂದು ನಾನು ಪರಿಗಣಿಸುತ್ತೇನೆ. ಅದು ನಮ್ಮ ಅವನತಿಯ ಕಾರಣಗಳಲ್ಲಿ ಒಂದು. ಭಾರತದ ಜನಸಾಮಾನ್ಯರನ್ನು ಮತ್ತೊಮ್ಮೆ ವಿದ್ಯಾವಂತರನ್ನಾಗಿಸು ವವರೆಗೂ, ಅನ್ನಬಟ್ಟೆಗಳನ್ನು ಒದಗಿಸಿ ಸರಿಯಾಗಿ ನೋಡಿಕೊಳ್ಳುವವರೆಗೂ ಎಷ್ಟೇ ರಾಜಕಾರಣದಿಂದಲೂ ಪ್ರಯೋಜನವಿಲ್ಲ.** – ಸ್ವಾಮಿ ವಿವೇಕಾನಂದ

ಪ್ರಾಣಿಗಳಲ್ಲೇನೋ ದೈಹಿಕ ಬೆಳವಣಿಗೆಯಲ್ಲಿ ಅಭಿವೃದ್ಧಿಯನ್ನು ಗುರುತಿಸಬಹುದು. ಇನ್ನೂ ಮುಂದುವರಿದು ಸರ್ಕಸ್ ಪ್ರಾಣಿಗಳು, ಪೋಲೀಸ್ ನಾಯಿಗಳು, ಮುಂತಾದುವಲ್ಲಿ ಧೈರ್ಯ, ಚಾಕಚಕ್ಯತೆ, ಬುದ್ಧಿಶಕ್ತಿ ಮತ್ತು ಇನ್ನೂ ಹಲವು ಪ್ರಾಣಿಗಳಲ್ಲಿ ಪ್ರೇಮ, ಕೃತಜ್ಞತೆಗಳನ್ನು ಕೂಡ ಗುರುತಿಸಬಹುದು. ಸಸ್ಯಗಳಲ್ಲಿ ಸಹ ಗಾತ್ರದ ಜತೆಗೆ ಹೂ ಹಣ್ಣುಗಳನ್ನು ನೀಡುವ ಸಾಮರ್ಥ್ಯವನ್ನು ಪ್ರಶಂಸಿಸುತ್ತೇವೆ. ಮಾನವನಿಗೂ ಆಯಾ ಕ್ಷೇತ್ರಗಳಲ್ಲಿ, ಸಂಬಂಧಿಸಿದ ಗುಣಗಳು ಅಳತೆಗೋಲಾಗಿದ್ದು, ಆಯಾ ಕ್ಷೇತ್ರದಲ್ಲಿ ಮಾತ್ರವೇ ಪರಿಪೂರ್ಣತೆಯನ್ನು ಸಾರುತ್ತವೆ. ಅಷ್ಟು ಮಾತ್ರಕ್ಕೆ ಅವುಗಳನ್ನು ಪರಿಪೂರ್ಣತೆಯೆಂದು ಹೇಳಲಾಗದು. ಇದಕ್ಕೆ ವಿರುದ್ಧವಾಗಿ, ಬುದ್ಧ, ಶ್ರೀರಾಮಕೃಷ್ಣ ಪರಮಹಂಸರು, ವಿವೇಕಾನಂದರು ಮುಂತಾದ ಮಹಾತ್ಮರಲ್ಲಿ ಮೂಲಭೂತವಾದ ಪರಿಪೂರ್ಣತೆಯನ್ನು ಕಾಣುತ್ತೇವೆ. ಇದರ ಹಿನ್ನೆಲೆ, ಸ್ವಾಮಿ ವಿವೇಕಾನಂದರು ಹೇಳುವಂತೆ, ಸುಪ್ತವಾಗಿರುವ ದಿವ್ಯತೆಯೊಂದೇ. ಅವರ ಸಂದೇಶವು **"ಪ್ರತಿಯೊಂದು ಆತ್ಮವೂ ಸುಪ್ತ ದೈವವೆ; ಇದರ ಪ್ರಕಾಶನವೆ ಜೀವನದ ಗುರಿ"** ಎಂದು ಘೋಷಿಸುತ್ತದೆ. ಇದು **'ಮನುಜಕುಲಕೆ ತಮ್ಮೊಳಿರ್ಪ ದಿವ್ಯಭಾವ ಬೋಧೆಗೈದು, ಅದನು ಬಾಳಯಾತ್ರೆಯಲ್ಲಿ ಅಡಿಗು ಅಡಿಗು ಬೆಳಗಿಸುವ'** ಸಂದೇಶ. ಈ ಆಧ್ಯಾತ್ಮಿಕ ಪರಿಪೂರ್ಣತೆಯು ಮಾನವರಲ್ಲಿ ಮಾತ್ರವೇ ಕಂಡುಬರುವಂಥದ್ದು; ಇತರ ಪ್ರಾಣಿಗಳಲ್ಲಿ ಕೇವಲ ಭೌತಿಕ ದೃಷ್ಟಿಯ ಪರಿಪೂರ್ಣತೆ ಕಂಡುಬರಬಹುದಷ್ಟೇ.

## ವಿವೇಕಾನಂದರ ದೃಷ್ಟಿ

ತಮ್ಮ ಅಲ್ಪಾವಧಿಯ ಜೀವಿತ ಕಾಲದಲ್ಲಿಯೇ, ಸ್ವಾಮಿ ವಿವೇಕಾನಂದರು ಭಾರತದ ಅಭಿವೃದ್ಧಿಯ ಬಗ್ಗೆ ಆಳವಾದ ಚಿಂತನೆ ನಡೆಸಿದರು. ಕಾಲ್ನಡಿಗೆಯಲ್ಲಿಯೇ ಭಾರತ ದೇಶದ ಉದ್ದಗಲಗಳನ್ನು ಸುತ್ತಿದ್ದ ಅವರು, ತಮ್ಮ ಪ್ರತ್ಯಕ್ಷ ಅನುಭವದ ಬೆಳಕಿನಲ್ಲಿ ಅದನ್ನು ವಿಶ್ಲೇಷಿಸಿದರು. ಅವರು ಚಿಂತಿಸಿದ ಸಮಸ್ಯೆಗಳು ಹತ್ತು ಹಲವಾರು: ಜನಕೋಟಿಯ ಉದ್ಧಾರ, ಸ್ವಾವಲಂಬನೆ ಮತ್ತು ಸಂಘಟನೆ, ಮಹಿಳಾ ವಿಮೋಚನೆ, ವಿದ್ಯಾಭ್ಯಾಸ, ಪೌರಸ್ತ್ಯ ಆಧ್ಯಾತ್ಮಿಕತೆ ಮತ್ತು ಪಾಶ್ಚಾತ್ಯ ವಿಜ್ಞಾನಗಳ ಪರಸ್ಪರ ವಿನಿಮಯ, ನವಭಾರತ ಸೃಷ್ಟಿ – ಒಂದೆ ಎರಡೇ! ಆಮೂಲಾಗ್ರ ಸುಧಾರಣೆಯೇ ಸ್ವಾಮಿ ವಿವೇಕಾನಂದರ ಮಂತ್ರ. ಅವರು ಆಗಿ ಹೋಗಿ ೧೦೬ ವರ್ಷಗಳಾದರೂ, ಅವರು ಕಂಡುಕೊಂಡ ಪರಿಹಾರಗಳು ಇಂದಿಗೂ ಪ್ರಸ್ತುತವಾಗಿವೆ. ಅವುಗಳಲ್ಲಿ ಎರಡನ್ನು ಮಾತ್ರ ಸಂಕ್ಷಿಪ್ತವಾಗಿ ಇಲ್ಲಿ ನೋಡೋಣ:

## ಜನಕೋಟಿಯ ಉದ್ಧಾರ

ನಮ್ಮದು ಹಳ್ಳಿಗಳ ದೇಶ. ಆದರೆ ಈಗ ಗ್ರಾಮಗಳಿಂದ ನಗರ ಪ್ರದೇಶಕ್ಕೆ ವಲಸೆ ನಡೆಯುತ್ತಲಿದೆ. ಹೀಗಾಗಿ, ಗ್ರಾಮಗಳು ನಿರ್ಲಕ್ಷಿಸಲ್ಪಟ್ಟು, ಗ್ರಾಮ, ನಗರ – ಎರಡೂ ಕಡೆ ಹೊಸ ಹೊಸ ಸಮಸ್ಯೆಗಳು ಸೃಷ್ಟಿಯಾಗುತ್ತಿವೆ. ಇದಕ್ಕೆ ಪರಿಹಾರ, ಶ್ರೀ ಅಬ್ದುಲ್ ಕಲಾಂ ಹೇಳುವಂತೆ, ಹಳ್ಳಿಗಳ ಅಭಿವೃದ್ಧಿಯಲ್ಲಿ ಇರುವುದಾದರೂ, ವಿವೇಕಾನಂದರ 'ಜನಕೋಟಿಯ ಉದ್ಧಾರ' ದ ಸಂದೇಶವು ಇದಕ್ಕೆ ಶಿಲಾಧಾರವಾಗಿ ನಿಲ್ಲುತ್ತದೆ ಎಂದು ಹೇಳಬಹುದು. "ದೇಶಕ್ಕೆ ಬೆನ್ನೆಲುಬಾಗಿ ನಿಂತ ಹೇ ಜನಕೋಟಿಯೇ! ನಾನು ನಿಮಗೆ ತಲೆಬಾಗುತ್ತೇನೆ" ಎಂದು ಸ್ವಾಮಿ ವಿವೇಕಾನಂದರು ಹೇಳುವಾಗ, ಜನಕೋಟಿಯ ಉದ್ಧಾರದ ಪ್ರಾಮುಖ್ಯತೆ ಮತ್ತು ವಿವೇಕಾನಂದರ ಹೃದಯಾಂತರಾಳ ನಮಗೆ ವೇದ್ಯವಾಗುತ್ತವೆ. ಇದಕ್ಕೆ ಬೆಂಬಲವಾಗುವ ಇತರ ಅಂಶಗಳೆಂದರೆ ವಿದ್ಯಾಭ್ಯಾಸ ಮತ್ತು ಯುವಶಕ್ತಿಯ ಆವಾಹನೆ. ಯುವಶಕ್ತಿಯು ಜಾಗ್ರತವಾದರೆ ದುಷ್ಟ ಅಭ್ಯಾಸಗಳು ದೂರವಾಗಿ, ಯುವಜನರಲ್ಲಿ ಆತ್ಮವಿಶ್ವಾಸ ಮೂಡಿ, ಮಹಾನ್ ಕಾರ್ಯಗಳನ್ನು ಸಾಧಿಸಲು ಅವರು ಸಮರ್ಥರಾಗುತ್ತಾರೆ. ವ್ಯಕ್ತಿನಿರ್ಮಾಣದಿಂದ ಎಲ್ಲಾ ಸಮಸ್ಯೆಗಳು ಸೂರ್ಯನ ಮುಂದಿನ ಮಂಜಿನಂತೆ ಮಾಯವಾಗುತ್ತವೆ.

## ಕೋಮು ಸಂಘರ್ಷ ಸಮಸ್ಯೆ

ದೇಶದೆಲ್ಲೆಡೆ ಬಾಧಿಸುತ್ತಿರುವ ಇನ್ನೊಂದು ಸಮಸ್ಯೆ ಕೋಮುಗಲಭೆ. ಇದು ಹಿಂಸೆಯ ರೂಪ ತಳೆದು ದೇಶದ ಶಾಂತಿ ಛಿದ್ರವಾಗುತ್ತಿದೆ. ಸಂಡೆ ಟೈಮ್ಸ್ ಆಫ್ ಇಂಡಿಯಾದ (ಸೆಪ್ಟೆಂಬರ್ ೭, ೨೦೦೮) ವಿಶೇಷ ವರದಿಯ ಪ್ರಕಾರ, ಭಾರತದಲ್ಲಿ ೨೦೦೧ ರಿಂದ ೨೦೦೭ ರವರೆಗೆ ಜರುಗಿದ ೪,೮೪೫ ಕೋಮು ಸಂಘರ್ಷದ ಘಟನೆಗಳಲ್ಲಿ, ೧,೯೪೭ ಮರಣಗಳು ಮತ್ತು ೧೬,೭೯೨ ಜನರಿಗೆ ಗಾಯಗಳು ಸಂಭವಿಸಿವೆ. ಅಹಿಂಸಾಜ್ಯೋತಿ ಭಗವಾನ್ ಬುದ್ಧ, ಸರ್ವಧರ್ಮ ಸಮನ್ವಯಾಚಾರ್ಯ ಶ್ರೀರಾಮಕೃಷ್ಣ, ಹಿಂದೂಧರ್ಮದ ಪ್ರತಿನಿಧಿಯಾಗಿ ಹೋಗಿದ್ದರೂ 'ಎಲ್ಲ ನದಿಗಳೂ ಸಮುದ್ರವನ್ನು ಸೇರುವಂತೆ ಎಲ್ಲ ಧರ್ಮಗಳೂ ದೇವರನ್ನು ಸೇರುತ್ತವೆ' ಎಂದು ಸರ್ವಧರ್ಮ ವಿಶ್ವ ವೇದಿಕೆಯಿಂದ ಘೋಷಿಸಿದ ಸ್ವಾಮಿ ವಿವೇಕಾನಂದರು, ಅಹಿಂಸೆಯಿಂದಲೆ ಸ್ವಾತಂತ್ರ್ಯ ಗಳಿಸಿಕೊಟ್ಟ ಮಹಾತ್ಮ ಗಾಂಧೀ – ಇವರೆಲ್ಲರೂ ಜನಿಸಿದ ನಮ್ಮ ಪವಿತ್ರ ಭಾರತದಲ್ಲಿ ಈ ಬಗೆಯ ಘೋರ ಮತ್ತು ಭಯಾನಕ ಹಿಂಸೆಯ ತಾಂಡವವಾಗುತ್ತಿರುವುದು ದುರದೃಷ್ಟವೇ ಸರಿ.

ಭಾರತೀಯ ವಿದ್ಯಾಭವನದ ಸ್ಥಾಪನೆಗೆ ಶ್ರಮಿಸಿದ

ಡಾ.ಕೆ.ಎಂ. ಮುನ್ಷಿಯವರು "ಅಲ್ಪಸಂಖ್ಯಾತರು ಯಾರು?" ಎಂಬ ತಮ್ಮ ಲೇಖನದಲ್ಲಿ ಅಲ್ಪಸಂಖ್ಯಾತರನ್ನು ಗುರುತಿಸುವ ಪ್ರಯತ್ನ ಮಾಡುತ್ತಾರೆ. ತಮ್ಮನ್ನು ಹಿಂದೂ, ಮಹಮದೀಯ, ಕ್ರೈಸ್ತ ಮುಂತಾಗಿ ಗುರುತಿಸಿಕೊಳ್ಳುವವರು ಸಹಸ್ರಾರು ಜನರಿದ್ದಾರೆ. ಆದರೆ 'ನಾನು ಭಾರತೀಯ' ಎಂದು ಹೇಳಿಕೊಳ್ಳುವವರು ಯಾರೂ ಇಲ್ಲವಲ್ಲ! ಆದ್ದರಿಂದ ಇಂದು ಭಾರತದಲ್ಲಿ ಅಲ್ಪಸಂಖ್ಯಾತರೆಂದರೆ 'ಭಾರತೀಯರು' ಎಂಬ ಅಭಿಪ್ರಾಯಕ್ಕೆ ಮುನ್ಷಿಯವರು ಬರುತ್ತಾರೆ. ಎಂತಹ ವಿಪರ್ಯಾಸ! ಭಾರತದಲ್ಲಿ ಭಾರತೀಯರು ಪೂರ್ಣಸಂಖ್ಯಾತರಾಗಬೇಕೇ ಹೊರತು, ಅಲ್ಪಸಂಖ್ಯಾತರಾಗಬಾರದಲ್ಲ! ತಾವು ಮೊಟ್ಟಮೊದಲು ಭಾರತೀಯರು ಮತ್ತು ಇತರರೂ ಹಾಗೆಯೇ ಎಂಬ ಸತ್ಯವನ್ನು ಭಾವನಾತ್ಮಕವಾಗಿ ಅನುಭವಿಸಿ ಹೃದಯಪೂರ್ವಕವಾಗಿ ಒಪ್ಪಿಕೊಳ್ಳದೆ ಇರುವುದರಿಂದಲೇ ಕೋಮು ಸೌಹಾರ್ದತೆ ನಶಿಸಿ, ಕೋಮು ಗಲಭೆಗಳು ಉಂಟಾಗುತ್ತಿವೆ. ನಾವು ನಮ್ಮ ತಾಯಿಯನ್ನು ಪೂಜ್ಯಭಾವನೆಯಿಂದ ಕಾಣುವುದು ಸರಿ. ಹಾಗೆಯೇ ಇತರರ ತಾಯಂದಿರನ್ನೂ ಕಾಣಬೇಕಲ್ಲವೇ? ಮಹಾತಾಯಿ ಭಾರತಿಯನ್ನು ಮೊದಲು ಆರಾಧಿಸಬೇಕಲ್ಲವೆ? ಹಾಗೆ ನೋಡಿದರೆ ಸಾಮಾನ್ಯ ಜನರ ನಡುವೆ ಯಾವ ವೈಷಮ್ಯವೂ ಇರುವುದಿಲ್ಲ. ಆದರೆ ದಲಿತರ ಮೇಲೆ ದೌರ್ಜನ್ಯ, ಬಡತನ, ಅಜ್ಞಾನಗಳು ಮತಾಂತರಕ್ಕೆ ಅಥವಾ ದ್ವೇಷ ಅಸೂಯೆಗಳಿಗೆ ಕಾರಣವಾಗಿ ಕೋಮು ಗಲಭೆ ಆಗಬಹುದು. ಕೋಮು ಗಲಭೆ ಮುಖ್ಯವಾಗಿ "ವಿದ್ಯಾವಂತ"ರ ಸೃಷ್ಟಿ. ಜಾತಿಪದ್ಧತಿ ಮತ್ತು ರಾಜಕೀಯ ಸಮೀಕರಣಗಳ ಗೊಂದಲದಲ್ಲಿ, ಬೆಂಕಿಗೆ ತುಪ್ಪ ಸುರಿದಂತೆ, ಭಯಂಕರ ಪರಿಣಾಮಗಳು ಉಂಟಾಗುತ್ತಿವೆ. ಆ ಮೂಲಕ ಈ ಸಮಸ್ಯೆಗೆ ಪರಿಹಾರಗಳನ್ನು ಕಂಡುಹಿಡಿಯುವ ಬದಲು, ಪರಿಹಾರಗಳನ್ನೇ ಹಿಂದಕ್ಕೆ ತಳ್ಳಲಾಗುತ್ತಿದೆ.

ಈ ಕಗ್ಗಂಟಿಗೆ ವಿವೇಕಾನಂದರ ವಿಚಾರಧಾರೆಯಲ್ಲಿ ದೊರಕುವ ಪರಿಹಾರವೆಂದರೆ **'ಆಮೂಲಾಗ್ರ ಸುಧಾರಣೆ'** ಅಂದರೆ ಸಮಸ್ಯೆಯನ್ನು ಅದರ ಪೂರ್ಣತೆಯಲ್ಲಿ ನೋಡಿ, ಪರಿಹಾರವನ್ನು ಕಂಡುಹಿಡಿಯುವುದು. ಮೊದಲನೆಯದಾಗಿ, **'ಸಹಿಷ್ಣುತೆ'** ಎಂಬ ಪದವನ್ನೇ ವಿವೇಕಾನಂದರು ಒಪ್ಪುವುದಿಲ್ಲ. "ನೀನು ಅಷ್ಟೇನು ಯೋಗ್ಯನಲ್ಲ, ಆದರೂ ನಾನು ನಿನ್ನನ್ನು ಸಹಿಸಿಕೊಳ್ಳುತ್ತೇನೆ" ಎಂಬ ಭಾವನೆಯ ಸಾಧ್ಯತೆ ಅದರಲ್ಲಿದೆಯೆಂದು ಅವರು ಹೇಳುತ್ತಾರೆ. ಅದಕ್ಕೆ ಬದಲಾಗಿ ವಿವೇಕಾನಂದರು ಬಳಸುವ ಪದ **'ಸ್ವೀಕೃತಿ'**. ಸತ್ಯ, ಶಾಂತಿಗಳಿಂದ ಕೂಡಿದ ನಲ್ಮೆಯ ಬಾಳನ್ನು ಭುವಿಗೆ ತರಲು ಅವರು ಕಂಡ ಭವಿಷ್ಯವಾಣಿಯೇ, ಸರ್ವಧರ್ಮ ಸಮ್ಮೇಳನದ ಅಂತಿಮ ಸುತ್ತಿನ ಸಭೆಯಲ್ಲಿ, ಈ ರೀತಿ ಹೊರಹೊಮ್ಮಿದೆ: "ಕ್ರಿಶ್ಚಿಯನ್, ಹಿಂದೂ ಅಥವಾ ಬೌದ್ಧನಾಗಲಿ, ಹಿಂದೂ ಅಥವಾ ಬೌದ್ಧನು ಕ್ರಿಶ್ಚಿಯನ್ ಆಗಲಿ, ಆಗುವ ಆವಶ್ಯಕತೆಯಿಲ್ಲ, ಆದರೆ ಪ್ರತಿಯೊಬ್ಬರೂ ಮತ್ತೊಬ್ಬರ ಅಂತರಾಳವನ್ನು ಕರಗತ ಮಾಡಿಕೊಂಡು ತಮ್ಮ ವ್ಯಕ್ತಿತ್ವವನ್ನುಳಿಸಿಕೊಂಡು ತಮ್ಮದೇ ಆದ ನಿಯಮಗಳ ಪ್ರಕಾರ ಬೆಳೆಯಬೇಕು."

"ಈ ಸರ್ವಧರ್ಮ ಸಮ್ಮೇಳನವು ಲೋಕಕ್ಕೆ ಏನಾದರೂ ತೋರಿಸಿಕೊಟ್ಟಿದ್ದರೆ ಅದು ಇದೇ. ಏನೆಂದರೆ ಪಾವಿತ್ರ್ಯ, ನೈರ್ಮಲ್ಯ ಮತ್ತು ಔದಾರ್ಯವು ಪ್ರಪಂಚದಲ್ಲಿ ಯಾವುದೊಂದು ಧಾರ್ಮಿಕ ಸಂಸ್ಥೆಯ ಅನಿರ್ಬಂಧಿತ ಆಸ್ತಿಯಲ್ಲ ಮತ್ತು ಪ್ರತಿ ಧರ್ಮವೂ ಉನ್ನತ ಶೀಲದ ಸ್ತ್ರೀಪುರುಷರನ್ನು ಈ ಲೋಕಕ್ಕೆ ನೀಡಿದೆ. ಈ ಸಾಕ್ಷ್ಯದ ಸಮ್ಮುಖದಲ್ಲಿ ಯಾರಾದರೂ ಕೇವಲ ತಮ್ಮ ಧರ್ಮದ ಉಳಿವನ್ನು ಮತ್ತು ಇತರ ಧರ್ಮಗಳ ಅಳಿವನ್ನು ಬಯಸಿದರೆ ಅಂತಹವರನ್ನು ನನ್ನ ಹೃದಯಾಂತರಾಳದಿಂದ ಕನಿಕರಿಸುತ್ತೇನೆ ಮತ್ತು ಪ್ರತಿ ಧರ್ಮದ ಧ್ವಜದ ಮೇಲೆಯೂ, ವಿರೋಧವಿದ್ದರೂ ಸಹ, ಈ ಸಂದೇಶವು ಶೀಘ್ರದಲ್ಲಿಯೇ ಬರೆಯಲ್ಪಡುವುದೆಂದು ಬೆಟ್ಟುಮಾಡಿ ತೋರಿಸುತ್ತೇನೆ: "ಹೋರಾಟವಲ್ಲ, ಪರಸ್ಪರ ಸಹಾಯ, ವಿನಾಶವಲ್ಲ, ಮೈಗೂಡಿಸಿಕೊಳ್ಳುವಿಕೆ","ವಿರೋಧ ವಲ್ಲ, ಸಮನ್ವಯತೆ ಮತ್ತು ಶಾಂತಿ."

ಯಾವ ಪ್ರಾಮಾಣಿಕ ಸೌಹಾರ್ದ ಸೋದರ ಭಾವನೆಯು ಸಮಸ್ತ ಜನರನ್ನು "ಅಕ್ಕತಂಗಿಯರೆ, ಅಣ್ಣತಮ್ಮಂದಿರೆ" ಎಂಬ ಔದಾರ್ಯದಲ್ಲಿ ಹೊರಹೊಮ್ಮಿ, ಎಲ್ಲ ಧರ್ಮಗಳನ್ನು ಒಗ್ಗೂಡಿಸಿತೋ ಆ ದಿವ್ಯಸಂಜೀವಿನಿಯೇ ಹೊಸ ಜಗತ್ತಿನಲ್ಲಿ ಇಂದು ಮತ್ತೆ ಮೂಡಿ ಬರಬೇಕಾಗಿದೆ. ಇದು ಸಾರ್ವಕಾಲಿಕ ಸತ್ಯ.

## ಯುವಜನತೆಯ ಹೊಣೆ

"ಸರ್ವಸಂಗಪರಿತ್ಯಾಗಿಯಾಗಿ ವಿಮುಕ್ತರಾಗಿದ್ದ ಈ ಯುವ ಸಂನ್ಯಾಸಿಗೆ ಒಂದು ಪ್ರೀತಿಯಿತ್ತು, ಅದು ಆತನ ದೇಶ; ಒಂದು ಅಳಲಿತ್ತು, ಅದು ಆ ದೇಶದ ದುರವಸ್ಥೆ" ಎಂದು ಪ್ರತ್ಯಕ್ಷದರ್ಶಿಯೊಬ್ಬರು ಬರೆಯುತ್ತಾರೆ. ಈ ಕಾರಣದಿಂದಲೇ ದೇಶದ ಅಭ್ಯುದಯಕ್ಕಾಗಿ, ಮಾನವಕೋಟಿಯ ಹಿತಕ್ಕಾಗಿ ಸ್ವಾಮಿ ವಿವೇಕಾನಂದರು ನಿರ್ವಿಕಲ್ಪ ಸಮಾಧಿಯನ್ನೂ ತೊರೆದು ಕಾರ್ಯ ಪ್ರವೃತ್ತರಾದರು. ರಾಮಕೃಷ್ಣ ಮಹಾಸಂಘವನ್ನು ಸ್ಥಾಪಿಸಿದ ಅವರು ಭಾರತದ ಪುನರುಜ್ಜೀವನಕ್ಕಾಗಿ ಮುಖ್ಯವಾಗಿ ಆದೇಶ ಕೊಡುವುದು ನಮ್ಮ ಯುವಜನತೆಗೆ. ಅವರಲ್ಲಿ ಅಪಾರ ನಂಬಿಕೆಯಿಟ್ಟಿದ್ದ ವಿವೇಕಾನಂದರು ಯುವಜನತೆ ಸಕಾರಾತ್ಮಕ ಚಿಂತನೆ, ವರ್ತನೆಗಳನ್ನು ಹೊಂದಿ ಶಕ್ತಿ, ಶ್ರದ್ಧೆ, ಸಂಘಟನೆ, ಸೇವಾ ಮನೋಭಾವಗಳ ಕವಚದೊಡನೆ, ಕಬ್ಬಿಣದ ಮಾಂಸಖಂಡಗಳು, ಉಕ್ಕಿನ ನರಗಳು, ಸಿಡಿಲಿನಂತಹ ಇಚ್ಛಾಶಕ್ತಿಯೊಡನೆ ಕಾರ್ಯಪ್ರವೃತ್ತರಾಗಬೇಕೆಂದು ಕರೆಯಿತ್ತರು.

ಇಂದಿನ ವಿಶ್ವದಲ್ಲಿ ಭಾರತಕ್ಕೆ, ತನ್ನ ಸ್ಥಾನಮಾನದ ಜೊತೆ ಜೊತೆಗೇ ಹೊಸ ಹೊಣೆಗಾರಿಕೆಯೂ ಇದೆ. ಆ ನೆಲೆಯಲ್ಲಿಯೇ ಪರಸ್ಪರ ಮುಕ್ತ ಚರ್ಚೆ ಸಂವಾದಗಳ ಮೂಲಕ ಎಲ್ಲ ಧರ್ಮಗಳೂ ಶಾಂತಿಗಾಗಿ ಕಾರ್ಯೋನ್ಮುಖರಾಗಬೇಕು. ಇದೇ ಸ್ವಾಮಿ ವಿವೇಕಾನಂದರ ಆಶಯವಾಗಿತ್ತು.